ಮೀನುಗಾರರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು

30 (114) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ವಿಭಾಗದಲ್ಲಿ ಮೀನುಗಾರರ ಅಭಿವೃದ್ಧಿಗೆ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ 3 ವರ್ಷಗಳಲ್ಲಿ ಮೀನುಗಾರರ ವಸತಿ ಸೌಕರ್ಯ ಕಲ್ಪಿಸಲು ರೂಪಿಸಿರುವ ಯೋಜನೆಗಳಾವುವು ; (ಮಾಹಿತಿ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ವಿಭಾಗದಲ್ಲಿ ಎಷ್ಟು ಮೀನು ಮಾರಾಟ ಕೇಂದ್ರಗಳನ್ನು ತೆರೆಯಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು) :–

(ಅ) ಹೈದ್ರಾಬಾದ್–ಕರ್ನಾಟಕ ವಿಭಾಗದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮೀನುಗಾರರ ಅಭಿವೃದ್ಧಿಗೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ :–

I. ಜಿಲ್ಲಾ ಪಂಚಾಯತ್ ಯೋಜನೆಗಳು

1) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ

2) ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ

3) ಪ್ರದರ್ಶನಗಳು ಮತ್ತು ತರಬೇತಿ

II. ರಾಜ್ಯ ವಲಯ ಯೋಜನೆಗಳು

1) ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಯೋಜನೆ

2) ಮೀನುಮರಿ ಖರೀದಿಗೆ ಸಹಾಯಧನ

3) ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ ಯೋಜನೆ

4) ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ/ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ವತಿಯಿಂದ ಕೆರೆ/ಜಲಾಶಯಗಳಲ್ಲಿ ಬಲಿತ ಮೀನುಮರಿ ಬಿತ್ತನೆ ಯೋಜನೆ

5) ವಸತಿ ರಹಿತ ಮೀನುಗಾರರಿಗೆ ಮನೆ ನಿರ್ಮಿಸಿಕೊಳ್ಳಲು ಮತ್ಸಾಶ್ರಯ ಯೋಜನೆ.

6) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯ, ಕೆರೆ ಅಂಚಿನಲ್ಲಿ ಮೀನುಮರಿ ಪಾಲನೆಗೆ ಕೊಳ ನಿರ್ಮಾಣಕ್ಕೆ ಸಹಾಯ ಹಾಗೂ ತೀವ್ರ ಮೀನು ಕೃಷಿ ಕೈಗೊಂಡ ಕೃಷಿಕರಿಗೆ ಸಹಾಯಧನ.

7) ಸಂಶೋಧನೆ, ವಿಸ್ತರಣೆ ಮತ್ತು ತರಬೇತಿ.

(ಆ) ಕಳೆದ 3 ವರ್ಷಗಳಲ್ಲಿ ಮೀನುಗಾರರ ವಸತಿ ಸೌಕರ್ಯ ಕಲ್ಪಿಸಲು ಕೇಂದ್ರ ಸರ್ಕಾರದ ನೆರವಿನ "ರಾಷ್ಟ್ರೀಯ ಮೀನುಗಾರರ ಕಲ್ಯಾಣ ಯೋಜನೆ"ಯಡಿ ಮನೆಗಳ ನಿರ್ಮಾಣ ಮಾಡಲಾಗುತ್ತಿದೆ . ಅದೇ ರೀತಿ ರಾಜ್ಯ ವಲಯದಡಿ "ಮತ್ಸ್ಯಾಶ್ರಯ" ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಗಳಡಿ ಶೇ.100 ರಷ್ಟು ಸಹಾಯಧನ ನೀಡಲಾಗುತ್ತದೆ.

(ಇ) ಹೈದ್ರಾಬಾದ್–ಕರ್ನಾಟಕ ವಿಭಾಗದಲ್ಲಿ ಬಳ್ಳಾರಿ ಜಿಲ್ಲೆ ತೋರಣಗಲ್ಲಿನಲ್ಲಿ ಒಂದು ಮೀನು ಮಾರಾಟ ಕೇಂದ್ರವನ್ನು ಜಿಲ್ಲಾ ಪಂಚಾಯತ್ ಅನುದಾನದಿಂದ ತೆರೆಯಲಾಗಿದೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನೊಂದಿಗೆ ಬಳ್ಳಾರಿ ನಗರದಲ್ಲಿ ರೂ. 1.29 ಕೋಟಿ ವೆಚ್ಚದಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಮಂಜೂರಾತಿ ಪಡೆಯಲಾಗಿದೆ.

ಕಾಮಗಾರಿಗಳು ಸ್ಥಗಿತಗೊಂಡಿರುವುದು

31 (115) ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಜಲಸಂಪನ್ಮೂಲ ಮತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ರೂ. 10.00 ಕೋಟಿಗಳಿಗಿಂತ ಮೇಲ್ಪಟ್ಟ ಎಷ್ಟು ಕಾಮಗಾರಿಗಳು ಸ್ಥಗಿತಗೊಂಡಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಈ ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು ; (ಕಾಮಗಾರಿವಾರು ಪ್ರತ್ಯೇಕ ವಿವರ ನೀಡುವುದು)

(ಇ) ಗುತ್ತಿಗೆದಾರರ ತಪ್ಪಿನಿಂದ ಸ್ಥಗಿತಗೊಂಡಿರುವ ಕಾಮಗಾರಿಗಳೆಷ್ಟು ಹಾಗೂ ಇಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಮತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :–

(ಅ)(ಆ)(ಇ) ರಾಜ್ಯದಲ್ಲಿ ರೂ. 10.00 ಕೋಟಿಗಳಿಗಿಂತ ಮೇಲ್ಪಟ್ಟ 9 ನೀರಾವರಿ ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಿವೆ ; ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.